## ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಸಿಡಿ/1864/2021
ಮಂಡನಾಧಿಕಾರಿಗಳ ಶಾಖೆ, ಎಆರ್ಇ-18

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು,
ದಿನಾಂಕ: 12/07/2022

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12 (3) ರನ್ವಯ ಶಿಫಾರಸ್ಸು ವರದಿ

ವಿಷಯ: (1) ಶ್ರೀಮತಿ ಎಸ್. ಭಾರತಿ ಕೋಂ ಮಹೇಶ್ ಕೆ. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ. ಪೂರ್ವ ವಲಯ ಕಾರ್ಯಾಲಯ, ಶಿವಾಜಿನಗರ ವಿಭಾಗ, ಕ್ವೀನ್ಸ್ ರಸ್ತೆ, ಬೆಂಗಳೂರು (2) ಶ್ರೀ ಶ್ರೀಧರ ಟಿ.ಹೆಚ್, ಬಿನ್ ಹನುಮಂತಯ್ಯ ಪಿ. ಸಹಾಯಕ ಅಭಿಯಂತರರು, ಬಿ.ಬಿ.ಎಂ.ಪಿ. ಕೇಂದ್ರ ಕಛೇರಿ, ಬೆಂಗಳೂರು ಇವರುಗಳು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

*****

1. ಬೆಂಗಳೂರು ನಗರ ಜಿಲ್ಲೆ, ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ (1) ಶ್ರೀಮತಿ ಎಸ್. ಭಾರತಿ ಕೋಂ ಮಹೇಶ್ ಕೆ. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ. ಪೂರ್ವ ವಲಯ ಕಾರ್ಯಾಲಯ, ಶಿವಾಜಿನಗರ ವಿಭಾಗ, ಕ್ವೀನ್ಸ್ ರಸ್ತೆ, ಬೆಂಗಳೂರು (2) ಶ್ರೀ ಶ್ರೀಧರ ಟಿ.ಹೆಚ್, ಬಿನ್ ಹನುಮಂತಯ್ಯ ಪಿ. ಸಹಾಯಕ ಅಭಿಯಂತರರು, ಬಿ.ಬಿ.ಎಂ.ಪಿ. ಕೇಂದ್ರ ಕಛೇರಿ, ಬೆಂಗಳೂರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ), ಶ್ರೀ ಕೆ.ಜೆ. ನಾಗರಾಜ್ ಬಿನ್ ಕೆ. ಜನಾರ್ದನ ರಾವ್, ಗುತ್ತಿಗೆದಾರರು, ನಂ. 81/38/1, 12ನೇ "ಡಿ" ಮುಖ್ಯರಸ್ತೆ, ಶಿವನಗರ, ಬೆಂಗಳೂರು-10 (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ದುರ್ನಡತೆ ತೋರಿಸಿರುತ್ತಾರೆಂದು ವರದಿ ಸಲ್ಲಿಸಿದ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿದಾಗ, ಎದುರುದಾರರ ದುರ್ನಡತೆ ತೋರಿಸಿರುವುದು

ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7 (2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರವರು ಸ್ವಯಂ ತನಿಖೆ ಕೈಗೊಂಡಿರುತ್ತಾರೆ.

2. ಪ್ರಕರಣದ ಸಂಕ್ಷಿಪ್ತ ಮಾಹಿತಿ :- ದೂರುದಾರರು ಸಿವಿಲ್ ಗುತ್ತಿಗೆದಾರರಾಗಿದ್ದು ಬಿ.ಬಿ.ಎಂ.ಪಿ. ವಾರ್ಡ್ ನಂ. 63 ಜಯಮಹಲ್, ರಾಜೀವಗಾಂಧಿ ಕಾಲೋನಿಯಲ್ಲಿ 2011-12 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗಾಗಿ ನೀಡಲಾಗಿರುವ 22.75 ಅನುದಾನದಡಿಯಲ್ಲಿ 12 ಜನ ಫಲಾನುಭವಿಗಳಾದ ಶ್ರೀಮತಿ ಈಶ್ವರಮ್ಮ, ಶ್ರೀಮತಿ ನಾಗಮಣಿ, ಶ್ರೀ ಅಪೋಜಿ, ಶ್ರೀ ತಿರುಪಾಲ, ಶ್ರೀ ನಾಗೇಂದ್ರ, ಶ್ರೀ ಚಿರಂಜೀವಿ, ಶ್ರೀ ಪುರುಷೋತ್ತಮ್, ಶ್ರೀಮತಿ ಅಚ್ಚಮ್ಮ ಮತ್ತು ಇತರರು ಮನೆಗಳನ್ನು ನಿರ್ಮಿಸಿಕೊಡಬೇಕೆಂದು ಕೋರಿದಂತೆ ದೂರುದಾರರು ಸದರಿಯವರಿಗೆ ಮನೆಗಳನ್ನು 2013ನೇ ಸಾಲಿನಲ್ಲಿ ನಿರ್ಮಿಸಿಕೊಟ್ಟಿರುತ್ತಾರೆ. ಸದರಿ ಫಲಾನುಭವಿಗಳಿಗೆ ಪ್ರಥಮ ಹಂತದ ಅನುದಾನವು 2013ನೇ ಸಾಲಿನಲ್ಲಿ ರೂ. 15 ಲಕ್ಷಗಳು ಬಿಡುಗಡೆಯಾಗಿರುತ್ತವೆ. ಅಂತಿಮ ಹಂತದ ಅನುದಾನದ ಹಣ ರೂ. 21 ಲಕ್ಷ ಬಿಡುಗಡೆ ಮಾಡಿಸಿಕೊಡುವ ಬಗ್ಗೆ ವಾರ್ಡ್ ನಂ. 63 ರಲ್ಲಿ ಪ್ರಥಮ ಹಂತದ ಬಿಡುಗಡೆ ಸಂದರ್ಭದಲ್ಲಿ ಕೆಲಸ ನಿರ್ವಹಿಸಿದಂತಹ 2ನೇ ಎದುರುದಾರರು ಮೇಲ್ಕಂಡ ಮನೆಗಳಿಗೆ ಸಂಬಂಧಿಸಿದಂತೆ ಸರ್ಕಾರಿ ದಾಖಲೆಗಳಾದ ಅಳತೆ ಪುಸ್ತಕವನ್ನು (ಎಂ.ಬಿ) ದೂರುದಾರರ ಕೈಗೆ ಹಸ್ತಾಂತರಿಸಿ ಸದರಿ ಪುಸ್ತಕದಲ್ಲಿ ಯಾವ ರೀತಿ ಅಳತೆಯನ್ನು ನಮೂದಿಸಬೇಕೆಂದು ತಿಳಿಸಿದ ಪ್ರಕಾರ ದೂರುದಾರರು ಅಳತೆಯನ್ನು ನಮೂದಿಸಿರುತ್ತಾರೆ. ನಂತರ 2ನೇ ಎದುರುದಾರರು 1ನೇ ಎದುರುದಾರರನ್ನು ಭೇಟಿ ಮಾಡಿ 1ನೇ ಎದುರುದಾರರ ಕೆಲವೊಂದು ಬೇಡಿಕೆಗಳನ್ನು ಈಡೇರಿಸಿದ್ದೇ ಆದರೆ ನಿಮ್ಮ ಕೆಲಸ ಆಗುತ್ತದೆ ಎಂದು ತಿಳಿಸಿರುತ್ತಾರೆ. ಅದರಂತೆ 1ನೇ ಎದುರುದಾರರನ್ನು ಒಂದು ವಾರದ ಹಿಂದೆ ದೂರುದಾರರು ಭೇಟಿ ಮಾಡಲಾಗಿ ಅವರು ಸದ್ಯ ವಾರ್ಡ್ ನಂ. 63 ರಲ್ಲಿ ಕೆಲಸ ಮಾಡಲು ಎಇ ಮತ್ತು ಎಇಇ ರವರುಗಳು ಯಾರೂ ಇರುವುದಿಲ್ಲ. ಆ ಕಾರಣ ಅವರ ಎಲ್ಲಾ ಕೆಲಸಗಳನ್ನು ನಾನೇ ಮಾಡಿಕೊಡುತ್ತೇನೆಂದು ಹೇಳಿ ರೂ. 2,50,000/- ಗಳ ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿರುತ್ತಾರೆ. ದೂರುದಾರರು ದಿನಾಂಕ 09/01/2016 ರಂದು 1ನೇ ಎದುರುದಾರರನ್ನು ಭೇಟಿ ಮಾಡಿ ಒಂದೇ ಬಾರಿಗೆ 2,50,000/- ರೂ.ಗಳನ್ನು ಕೊಡಲು ಸಾಧ್ಯವಿಲ್ಲ, ಈಗ ಸದ್ಯಕ್ಕೆ 25,000/- ರೂ.ಗಳನ್ನು ತಂದುಕೊಡುವುದಾಗಿ ಉಳಿದ ಹಣವನ್ನು ಚೆಕ್ ಮುಖಾಂತರ ನೀಡುವುದಾಗಿ ತಿಳಿಸಿರುತಾರೆ. ಅದಕ್ಕೆ 1ನೇ ಎದುರುದಾರರು ಚೆಕ್ ಬೇಡವೆಂದು ಹೇಳಿ ಈಗ ನಿಮ್ಮ ಬಳಿ ಇರುವ 25,000/- ರೂ.ಗಳನ್ನು ತಂದು ಕೊಡಿ, ಉಳಿದ ರೂ. 2,25,000/-ಗಳನ್ನು ನೀಡಿದ ನಂತರ ನಿಮ್ಮ ಕೆಲಸವನ್ನು ಮಾಡಿಕೊಡುವುದಾಗಿ

ತಿಳಿಸಿರುತ್ತಾರೆ. ಮೇಲ್ಕಂಡ ಫಲಾನುಭವಿಗಳಿಗೆ ಹಣ ಬಿಡುಗಡೆಯಾಗದ ಹೊರತು ಮನೆಗಳನ್ನು ನಿರ್ಮಿಸಿಕೊಡುವುದಕ್ಕಾಗಿ ದೂರುದಾರರು ತಾನು ವ್ಯಯಿಸಿದ ಹಣ ಬಿಡುಗಡೆ ಆಗುವುದಿಲ್ಲ ಮತ್ತು ಎದುರುದಾರರು ಲಂಚದ ಹಣಕ್ಕಾಗಿ ಒತ್ತಾಯಿಸಿರುವ ಸಂಭಾಷಣೆಗಳನ್ನು ರೆಕಾರ್ಡ್ ಮಾಡಿ ಒಂದು ಸಿ.ಡಿ.ಗೆ ವರ್ಗಾಯಿಸಿಕೊಂಡಿರುತ್ತಾರೆ.

3. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೇ ಇದ್ದುದರಿಂದ, ದಿನಾಂಕ 09/01/2017 ರಂದು ಮಧ್ಯಾಹ್ನ 2-30 ಘಂಟೆಗೆ ಭ್ರಷ್ಟಾಚಾರ ನಿಗ್ರಹ ದಳ ಬೆಂಗಳೂರು ನಗರ ಪೊಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯ ಮುಂದೆ ದೂರು ನೀಡಿದ್ದು ಸದರಿ ಪೊಲೀಸ್ ಠಾಣೆಯಲ್ಲಿ ಮೊ. ಸಂ. 02/2017 ಪಿ.ಸಿ. ಕಾಯಿದೆ ಕಲಂ 7, 13(2) ರಡಿ 1 ಮತ್ತು 2ನೇ ಎದುರುದಾರರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

4. ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ ಶ್ರೀ ಅರವಿಂದ ಸಿ. ಬಿನ್ ಚನ್ನಿಗರಾಮಯ್ಯ ಮತ್ತು ಶ್ರೀಮತಿ ಜೆನ್ನಿಫರ್ ಬಿನ್ ಸಾವೇರ್‌ನರೂನ್ಹ ಇವರನ್ನು ಬರಮಾಡಿಕೊಂಡಿದ್ದು, ಅವರುಗಳ ಪರಿಚಯ ಮಾಡಿಕೊಂಡು ಹಾಗೂ ದೂರುದಾರರಿಗೆ ಪರಿಚಯ ಮಾಡಿಸಿ ದೂರಿನ ಪ್ರತಿಯನ್ನು ಪಂಚರುಗಳಿಗೆ ನೀಡಿ ಅದರಲ್ಲಿರುವ ಸಾರಾಂಶವನ್ನು ತಿಳಿದುಕೊಳ್ಳಲು ಸೂಚಿಸಿರುತ್ತಾರೆ. ದೂರುದಾರರು ಈ ಹಿಂದೆ ತಮ್ಮ ಮೊಬೈಲ್‌ನಲ್ಲಿ ಎದುರುದಾರರಿಬ್ಬರೂ ಲಂಚದ ಹಣಕ್ಕಾಗಿ ಒತ್ತಾಯಿಸಿರುವ ಸಂಭಾಷಣೆಯನ್ನು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡು ಒಂದು ಸಿ.ಡಿ.ಗೆ ವರ್ಗಾಯಿಸಿಕೊಂಡಿರುವುದಾಗಿ ಹೇಳಿ ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿರುತ್ತಾರೆ. ಎದುರುದಾರರು ಲಂಚಕ್ಕಾಗಿ ಬೇಡಿಕೆ ಇಟ್ಟಿರುವುದು ಕಂಡುಬರುತ್ತದೆ.

5. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ಲಂಚ ನೀಡಲು ತಂದ (ರೂ. 2000/- ಮುಖ ಬೆಲೆಯ 11 ನೋಟುಗಳು ಮತ್ತು 500/- ರೂ. ಮುಖಬೆಲೆಯ 2 ನೋಟುಗಳು ) ಒಟ್ಟು 23,000/- ರೂ.ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದಾಗ ತನಿಖಾಧಿಕಾರಿಗಳು ಪಂಚ-2ರವರಿಗೆ ಹಣವನ್ನು ನೀಡಿದ್ದು ಅವರು ಅದನ್ನು ಪಡೆದುಕೊಂಡು ಎಣಿಸಿ ನೋಡಿ ಸರಿ ಇದೆ ಎಂದು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಸಿಬ್ಬಂದಿಯವರ ಸಹಾಯದಿಂದ ಪಂಚರು ತಿಳಿಸಿದಂತೆ ಸದರಿ ಹಣದ ನಂಬರ್ ಮತ್ತು ಮೌಲ್ಯವನ್ನು ಪ್ರತ್ಯೇಕ ಹಾಳೆಯಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ. ನಂತರ ಪೊಲೀಸ್ ಸಿಬ್ಬಂಧಿ ಸದರಿ ನೋಟುಗಳಿಗೆ ಫಿನಾಪ್ತಲಿನ್ ಪೌಡರನ್ನು ಲೇಪನ ಮಾಡಿರುತ್ತಾರೆ. ಫಿನಾಪ್ತಲಿನ್ ಪುಡಿ ಲೇಪನ ಮಾಡಿದ ನೋಟುಗಳನ್ನು ಪಂಚ-2 ರವರ ಕೈಗೆ ಕೊಟ್ಟು ಎಣಿಸಿ ಅವುಗಳ ನಂಬರ್ ಮತ್ತು ಮೌಲ್ಯವನ್ನು ನಮೂದು ಮಾಡಿಕೊಂಡಿರುವುದಕ್ಕೆ ತಾಳೆಯಾಗುತ್ತಿರುವ ಬಗ್ಗೆ ಖಾತ್ರಿ ಮಾಡಿಕೊಳ್ಳಲು

ತಿಳಿಸಿದಾಗ ಅವರು ಎಣಿಸಿ ನಂಬರ್ ಮತ್ತು ಮೌಲ್ಯ ತಾಳೆಯಾಗುತ್ತಿರುವ ಬಗ್ಗೆ ತಿಳಿಸಿರುತ್ತಾರೆ. ತನಿಖಾಧಿಕಾರಿಯವರು ಪಂಚ ಸಾಕ್ಷಿ-1 ರವರಿಗೆ ದೂರುದಾರರು ಧರಿಸಿದ್ದ ಪ್ಯಾಂಟಿನ ಎಡಭಾಗದ ಜೇಬಿನಲ್ಲಿ ಯಾವುದೇ ಕಾಗದಪತ್ರವಾಗಲೀ ಹಣವಾಗಲೀ ಇಲ್ಲದಿರುವ ಬಗ್ಗೆ ಖಾತ್ರಿ ಮಾಡಿಕೊಳ್ಳಲು ತಿಳಿಸಿದ ಪ್ರಕಾರ ಅವರು ಜೇಬನ್ನು ಪರೀಕ್ಷಿಸಿ ಬೇರೆ ಏನೂ ಇಲ್ಲದಿರುವ ಬಗ್ಗೆ ತಿಳಿಸಿದಾಗ ತನಿಖಾಧಿಕಾರಿಗಳು ಪಂಚ-2 ರವರ ಕೈಯಲ್ಲಿದ್ದ ಪಿನಾಪ್ತಲಿನ್ ಪುಡಿ ಲೇಪಿತ ಹಣವನ್ನು ದೂರುದಾರರು ದರಿಸಿದ್ದ ಪ್ಯಾಂಟಿನ ಎಡಭಾಗದ ಜೇಬಿನಲ್ಲಿ ಇಟ್ಟಿರುತ್ತಾರೆ.

6. ನಂತರ ತನಿಖಾಧಿಕಾರಿಗಳು ದೂರುದಾರರಿಗೆ ನೀವು ಪಂಚ-1 ರವರನ್ನು ನಿಮ್ಮ ಸ್ನೇಹಿತರಂತೆ ಜೊತೆಯಲ್ಲಿ ಕರೆದುಕೊಂಡು ಹೋಗಿ 1ನೇ ಎದುರುದಾರರನ್ನು ಭೇಟಿ ಮಾಡುವಂತೆ ಮತ್ತು ಅವರನ್ನು ಭೇಟಿ ಮಾಡಿದ ಸಮಯದಲ್ಲಿ ಅವರು ಲಂಚದ ಹಣಕ್ಕಾಗಿ ಒತ್ತಾಯ ಮಾಡಿದರೆ ಮಾತ್ರ ಪಿನಾಪ್ತಲಿನ್ ಪೌಡರ್ ಲೇಪಿತ ಲಂಚದ ಹಣ ಅವರಿಗೆ ಕೊಡಬೇಕೆಂದು ಹಾಗೆ ಕೊಟ್ಟಾಗ ಅವರು ಅದನ್ನು ಯಾವ ರೀತಿಯಲ್ಲಿ ಪಡೆದುಕೊಳ್ಳುತ್ತಾರೆ, ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಅವರಿಗೆ ಅನುಮಾನ ಬಾರದ ರೀತಿಯಲ್ಲಿ ಗಮನಿಸಿಕೊಂಡು ಹೊರಗೆ ಕಾಯುತ್ತಿರುವ ನಮಗೆ ನಿಮ್ಮ ಕೈಯಿಂದ ತಲೆಯನ್ನು ಒರೆಸಿಕೊಳ್ಳುವುದರ ಮೂಲಕ ಎದುರುದಾರರು ಲಂಚದ ಹಣವನ್ನು ಪಡೆದುಕೊಂಡಿರುವ ಬಗ್ಗೆ ಸೂಚನೆಯನ್ನು ನೀಡಬೇಕೆಂದು ತಿಳಿಸಿರುತ್ತಾರೆ. ತನಿಖಾಧಿಕಾರಿಗಳು ಪಂಚ 1 ರವರಿಗೂ ಸಹ 1ನೇ ಎದುರುದಾರರಿಗೆ ಅನುಮಾನ ಬಾರದಂತೆ ಮತ್ತು ಅವರಿಬ್ಬರ ನಡುವೆ ನಡೆದ ಸಂಭಾಷಣೆಯನ್ನು ಕೇಳಿಸಿಕೊಂಡು ಘಟನೆಯನ್ನು ವೀಕ್ಷಿಸಿ 1ನೇ ಎದುರುದಾರರು ಹಣವನ್ನು ಕೇಳಿ ಪಡೆದುಕೊಂಡರೆ ಅದನ್ನು ಹೇಗೆ ಪಡೆದುಕೊಳ್ಳುತ್ತಾರೆ, ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಗಮನಿಸಿ ತಮಗೆ ತಿಳಿಸಬೇಕೆಂದು ತಿಳುವಳಿಕೆ ನೀಡಿರುತ್ತಾರೆ. ತನಿಖಾಧಿಕಾರಿಗಳು ಪಂಚ--2 ರವರ ಎರಡೂ ಕೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದುಕೊಂಡಾಗ, ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ತನಿಖಾಧಿಕಾರಿಗಳು ಎಲ್ಲರಿಗೂ ಸೋಪಿನಿಂದ ಕೈಗಳನ್ನು ತೊಳೆದುಕೊಳ್ಳಲು ತಿಳಿಸಿ ತಾನೂ ಸಹ ಸೋಪಿನಿಂದ ಕೈಗಳನ್ನು ತೊಳೆದುಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳು ಪಂಚ-2 ರವರಿಗೆ ಒಂದು ಯು.ಎಸ್.ಬಿ ರೆಕಾರ್ಡ್‌ರನ್ನು ನೀಡಿ ಅದನ್ನು ದೂರುದಾರರ ಶರ್ಟಿನ ಜೇಬಿನಲ್ಲಿರಿಸಿ ದೂರುದಾರರಿಗೆ ಸದರಿ ಉಪಕರಣವನ್ನು ಬಳಸುವ ವಿಧಾನವನ್ನು ತೋರಿಸಿಕೊಟ್ಟು ಎದುರುದಾರರನ್ನು ಭೇಟಿ ಮಾಡಲು ಹೋದ ಸಮಯದಲ್ಲಿ ನಡೆಯುವ ಸಂಭಾಷಣೆಯನ್ನು ಧ್ವನಿ ಮುದ್ರಿಸಿಕೊಂಡು ಮುಂದಿನ ತನಿಖಾ ಸಮಯದಲ್ಲಿ ಹಾಜರುಪಡಿಸಲು ಸೂಚಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋಗಳನ್ನು ತೆಗೆಸಿ

ದಿ: 09/01/2017 ರಂದು ಮಧ್ಯಾಹ್ನ 03-45 ಘಂಟೆಯಿಂದ 4-50 ಘಂಟೆಯವರೆಗೆ ಬೆಂಗಳೂರು ನಗರ ಠಾಣೆ ಎಸಿಬಿ ಕಛೇರಿಯಲ್ಲಿ ಕಂಪ್ಯೂಟರ್ ಮೂಲಕ ಗಣಕೀಕರಣ ಮಾಡಿದ ಪ್ರಾಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

7. ದಿನಾಂಕ 09/01/2017 ರಂದು ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲ ಔಚಿತ್ಯಪೂರ್ವ ನಡವಳಿಕೆಗಳನ್ನು ನಡೆಸಿದ ನಂತರ ದೂರುದಾರರು ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ಸರ್ಕಾರಿ ವಾಹನದಲ್ಲಿ ಸಂಜೆ 4-50 ಘಂಟೆ ಸಮಯದಲ್ಲಿ ಹೊರಟು ಮಾರ್ಗ ಮಧ್ಯದಲ್ಲಿ ಎದುರುದಾರರು ಇರುವಿಕೆಯ ಬಗ್ಗೆ ತಿಳಿದುಕೊಳ್ಳಲು ಸುಮಾರು 4-54 ಘಂಟೆ ಸಮಯದಲ್ಲಿ ದೂರುದಾರರು ತಮ್ಮ ಮೊಬೈಲ್ ನಂ. 9035114050 ದಿಂದ 1ನೇ ಎದುರುದಾರರ ಮೊಬೈಲ್ ನಂ. 9480683536 ಗೆ ಕರೆ ಮಾಡಿದಾಗ 1ನೇ ಎದುರುದಾರರು ದೂರುದಾರರಿಗೆ ಮೀಟಿಂಗ್‌ನಲ್ಲಿರುವುದಾಗಿ ಅರ್ಧ ಘಂಟೆ ನಂತರ ಕಛೇರಿಗೆ ಬರುತ್ತೇನೆಂದು ತಿಳಿಸಿರುತ್ತಾರೆ. ಹಾಗಾಗಿ ತನಿಖಾಧಿಕಾರಿಗಳು ಎಲ್ಲರನ್ನೂ 1ನೇ ಎದುರುದಾರರು ಕರ್ತವ್ಯ ನಿರ್ವಹಿಸುವ ಕ್ವೀನ್ಸ್ ರಸ್ತೆಯಲ್ಲಿರುವ ಪೂರ್ವವಲಯ ಕಾರ್ಯಾಲಯ, ಶಿವಾಜಿನಗರದ ಕಛೇರಿಗೆ ಸಂಜೆ 5-15 ಘಂಟೆಗೆ ತಲುಪಿ ಸುಮಾರು 300 ಅಡಿಗಳ ದೂರದಲ್ಲಿ ವಾಹನವನ್ನು ಗುಪ್ತವಾಗಿ ನಿಲ್ಲಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ನೀಡಿದ ಸೂಚನೆಯಂತೆ ದೂರುದಾರರು ತಮ್ಮ ಮೊಬೈಲ್‌ನಿಂದ 1ನೇ ಎದುರುದಾರರ ಮೊಬೈಲಿಗೆ ಸಂಜೆ 5-49 ಘಂಟೆಗೆ ಕರೆ ಮಾಡಿದಾಗ 1ನೇ ಎದುರುದಾರರು ಕರೆಯನ್ನು ಸ್ವೀಕರಿಸಿದ್ದರೂ ಸಹ ಸರಿಯಾಗಿ ಮಾತನಾಡಿರುವುದಿಲ್ಲ. ನಂತರ ಸುಮಾರು 6-59 ಘಂಟೆಗೆ 1ನೇ ಎದುರುದಾರರು ತಮ್ಮ ಮೊಬೈಲ್‌ನಿಂದ ದೂರುದಾರರ ಮೊಬೈಲಿಗೆ ಕರೆ ಮಾಡಿ ಮೀಟಿಂಗ್ ಲೇಟಾಯ್ತು, ಈಗ ಕಛೇರಿಯಲ್ಲಿ ಯಾರೂ ಇರುವುದಿಲ್ಲ, ನಾಳೆ ಬನ್ನಿ ಎಂದು ತಿಳಿಸಿರುವುದಾಗಿ ದೂರುದಾರರು ತನಿಖಾಧಿಕಾರಿಯವರಿಗೆ ತಿಳಿಸಿದಾಗ ತನಿಖಾಧಿಕಾರಿಯವರು ಟ್ರಾಪ್ ತಂಡದ ಎಲ್ಲಾ ಸದಸ್ಯರನ್ನು ಕರೆದುಕೊಂಡು ವಾಪಸ್ಸು ಎ.ಸಿ.ಬಿ. ಬೆಂಗಳೂರು ನಗರ ಠಾಣೆಗೆ ವಾಪಸ್ಸಾಗಿರುತ್ತಾರೆ. ನಂತರ ತನಿಖಾಧಿಕಾರಿಗಳು ಟ್ರಾಪ್ ತಂಡದ ಎಲ್ಲರಿಗೂ ದಿ: 10/01/2017 ರಂದು ಬೆಳಿಗ್ಗೆ 9-30 ಘಂಟೆಗೆ ಹಾಜರಾಗಲು ತಿಳಿಸಿರುತ್ತಾರೆ.

8. ಅದರಂತೆ ಅವರೆಲ್ಲರೂ ದಿ: 10/01/2017 ರಂದು ಬೆಳಿಗ್ಗೆ 10-30 ಘಂಟೆಗೆ ತನಿಖಾಧಿಕಾರಿಗಳ ಮುಂದೆ ಹಾಜರಾಗಿರುತ್ತಾರೆ. ನಂತರ ತನಿಖಾಧಿಕಾರಿಗಳು ಈ ಹಿಂದೆ ಪ್ರಾಯೋಗಿಕ ಪಂಚನಾಮೆಯ ಸಮಯದಲ್ಲಿ ನೀಡಿದ ಸೂಚನೆಗಳನ್ನು ಮತ್ತು ತಿಳುವಳಿಕೆಗಳನ್ನು ದೂರುದಾರರಿಗೆ ನೀಡಿ ನೆರಳು ಸಾಕ್ಷಿದಾರರಿಗೂ ಸಹ ಸೂಕ್ತ ತಿಳುವಳಿಕೆಯನ್ನು ನೀಡಿರುತ್ತಾರೆ. ನಂತರ ತನಿಖಾಧಿಕಾರಿಗಳು ಎಲ್ಲರನ್ನೂ

ಕರೆದುಕೊಂಡು ಸರ್ಕಾರಿ ವಾಹನದಲ್ಲಿ ಠಾಣೆಯನ್ನು ಬೆಳಿಗ್ಗೆ 11–15 ಘಂಟೆಗೆ ಬಿಟ್ಟು ಎದುರುದಾರರ ಕಛೇರಿಗೆ ಬೆಳಿಗ್ಗೆ ಸುಮಾರು 11–40 ಘಂಟೆಗೆ ತಲುಪಿ ಸದರಿ ಸ್ಥಳದಿಂದ ಸುಮಾರು 300 ಅಡಿ ಅಂತರದಲ್ಲಿ ವಾಹನವನ್ನು ನಿಲ್ಲಿಸಿರುತ್ತಾರೆ. ದೂರುದಾರರು ಹಾಗೂ ನೆರಳು ಸಾಕ್ಷಿ ಶ್ರೀ ಅರವಿಂದ ಸಿ. ರವರಿಗೆ ಮತ್ತೊಮ್ಮೆ ತಿಳುವಳಿಕೆಯನ್ನು ಕೊಟ್ಟು ಸುಮಾರು 11–45 ಘಂಟೆಗೆ 1ನೇ ಎದುರುದಾರರನ್ನು ಭೇಟಿ ಮಾಡಲು ಕಳುಹಿಸಿರುತ್ತಾರೆ.

9. ಅವರಿಬ್ಬರೂ 1ನೇ ಎದುರುದಾರರು ಕರ್ತವ್ಯ ನಿರ್ವಹಿಸಿಕೊಂಡಿದ್ದ ಕೊಠಡಿಗೆ ಹೋದಾಗ ದೂರುದಾರರು ನೆರಳು ಸಾಕ್ಷಿಗೆ ತನ್ನ ಹಿಂದೆ ಕುರ್ಚಿಯಲ್ಲಿ ಕುಳಿತುಕೊಳ್ಳುವಂತೆ ತಿಳಿಸಿ ತಾನು ಎದುರುದಾರರ ಮುಂದೆ ಇರುವ ಕುರ್ಚಿಯಲ್ಲಿ ಕುಳಿತುಕೊಂಡು ಬೆಳಿಗ್ಗೆ ಬರುವುದಕ್ಕೆ ಫೋನ್ ಮಾಡಿದ್ರಲ್ಲ ಮೇಡಂ, ಬಂದಿದೀನಿ ಎಂದು ತಿಳಿಸಿ ಜೇಬಿನಿಂದ ಪಿನಾಪ್ತಲಿನ್ ಪೌಡರ್ ಲೇಪಿತ ಲಂಚದ ಹಣವನ್ನು ತೆಗೆದುಕೊಟ್ಟಾಗ 1ನೇ ಎದುರುದಾರರು ಹಣವನ್ನು ತಮ್ಮ ಬಲಗೈನ ಹೆಬ್ಬೆರಳು ಮತ್ತು ತೋರು ಬೆರಳುಗಳ ಮೂಲಕ ಪಡೆದುಕೊಂಡಿರುತ್ತಾರೆ. ಆಗ ದೂರುದಾರರು ಮೇಡಂ ಎಣಿಸಿಕೊಳ್ಳಿ, ರೂ. 25,000/– ದಲ್ಲಿ ಎರಡು ಸಾವಿರ ಬಡ್ಡಿ ಮುರಿದುಕೊಂಡು ಕೊಟ್ಟಿದ್ದಾರೆ. 23,000/– ರೂ.ಗಳಿವೆ ಎಂದು ತಿಳಿಸಿದಾಗ ನೀವು ಪರವಾಗಿಲ್ಲ ಬಿಡಿ ಎಂದು ತಿಳಿಸಿ ಹಣವನ್ನು ಹಾಗೆಯೇ ತಮ್ಮ ವ್ಯಾನಿಟಿ ಬ್ಯಾಗ್‌ನಲ್ಲಿ ಇಟ್ಟುಕೊಂಡಿರುತ್ತಾರೆ.

10. ನಂತರ ದೂರುದಾರರು ಕೊಠಡಿಯಿಂದ ಹೊರಗೆ ಬಂದು ಬಾಗಿಲಿನ ಬಳಿ ನಿಂತು ಅವರಿಗೆ ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನೀಡಿದ ಸೂಚನೆಯ ಪ್ರಕಾರ ತಮ್ಮ ಕೈಯಿಂದ ತಲೆಯನ್ನು ವರೆಸಿಕೊಳ್ಳುವುದರ ಮೂಲಕ ನಿಗದಿತ ಸಿಗ್ನಲ್‌ನ್ನು ನೀಡಿದಾಗ ತನಿಖಾಧಿಕಾರಿಗಳು ಅಲ್ಲಿಗೆ ಬಂದು 1ನೇ ಎದುರುದಾರರ ಬಲಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಸದರಿ ದ್ರಾವಣವನ್ನು ತನಿಖಾಧಿಕಾರಿಗಳು ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳು ನೆರಳು ಸಾಕ್ಷಿಗೆ ಕೇಳಿದಾಗ ಅವರು ಸದರಿ ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿರುವುದಾಗಿ ಮತ್ತು 1ನೇ ಎದುರುದಾರರು ದೂರುದಾರರಿಂದ ಲಂಚದ ಹಣವನ್ನು ತಮ್ಮ ಬಲಗೈ ಹೆಬ್ಬೆರಳು ಮತ್ತು ತೋರು ಬೆರಳುಗಳಿಂದ ಪಡೆದು ತಮ್ಮ ವ್ಯಾನಿಟಿ ಬ್ಯಾಗಿನಲ್ಲಿ ಇಟ್ಟುಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ. ತನಿಖಾಧಿಕಾರಿಗಳು 1ನೇ ಎದುರುದಾರರಿಂದ ಹಣವನ್ನು ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳು 1ನೇ ಎದುರುದಾರರ ವ್ಯಾನಿಟಿ ಬ್ಯಾಗಿನ ಒಳಭಾಗವನ್ನು ಒಂದು ತುಂಡು ಹತ್ತಿಯಿಂದ ವರೆಸಿ, ಸದರಿ ಹತ್ತಿಯನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ

ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ತನಿಖಾಧಿಕಾರಿಯವರು ದ್ರಾವಣ, ಹತ್ತಿ ಹಾಗೂ ವ್ಯಾನಿಟಿ ಬ್ಯಾಗನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತಾರೆ.

11. ತನಿಖಾಧಿಕಾರಿಯವರು 1ನೇ ಎದುರುದಾರರಿಗೆ ಸಮಜಾಯಿಷಿಯನ್ನು ಬರೆದುಕೊಡಲು ತಿಳಿಸಿದ ಪ್ರಕಾರ ಅವರು ತಮ್ಮ ಸಮಜಾಯಿಷಿಯಲ್ಲಿ "ತಾನು ಯಾವುದೇ ತಪ್ಪು ಮಾಡಿರುವುದಿಲ್ಲ ಹಾಗೂ ಒಬ್ಬ ವ್ಯಕ್ತಿ ಬಂದು ತಾನು ಸಿನಿಮಾದ ನಾಗರಾಜು, ತಾನು ಕೆಲವು ಕೆಲಸಗಳನ್ನು ಮಾಡಿರುತ್ತೇನೆ. ನನ್ನ ವಿಷಯವಾಗಿ ಮಹಾಪೌರರು ತಮಗೆ ದೂರವಾಣಿಯ ಮೂಲಕ ಕರೆ ಮಾಡುತ್ತಾರೆ. ನನಗೆ ಸಹಾಯ ಮಾಡು ಎಂದು ತಿಳಿಸಿ ನನ್ನ ಖಾಲಿ ಬ್ಯಾಗ್ ನಲ್ಲಿ ದುಡ್ಡು ಇಟ್ಟಿದ್ದನ್ನು ನೋಡಿ ಈ ತರ ಮಾಡಬೇಡಿ ಎಂದು ತಿಳಿಸಿದರೂ ಸಹ ಕೇಳದೆ ಇಟ್ಟಿರುತ್ತಾರೆ" ಎಂದು ಬರೆದುಕೊಟ್ಟ ಸಮಜಾಯಿಷಿಯ ಬಗ್ಗೆ ದೂರುದಾರರು ಹಾಗೂ ನೆರಳು ಸಾಕ್ಷಿದಾರರಿಗೆ ಕೇಳಿದಾಗ ಅವರಿಬ್ಬರೂ 1ನೇ ಎದುರುದಾರರಿಗೆ ಲಂಚದ ಹಣವನ್ನು ನೀಡಿದಾಗ ಅವರು ಅದನ್ನು ಸ್ವೀಕರಿಸಿ ತಮ್ಮ ವ್ಯಾನಿಟಿ ಬ್ಯಾಗಿನಲ್ಲಿಟ್ಟುಕೊಂಡಿರುವುದು ಸತ್ಯವಾಗಿರುತ್ತದೆ ಮತ್ತು ತಮ್ಮ ಸಮಜಾಯಿಷಿಯಲ್ಲಿ ತಿಳಿಸಿರುವಂತೆ ದೂರುದಾರರು ಇಟ್ಟಿರುವುದಿಲ್ಲ ಎಂದು ದೃಢೀಕರಿಸಿರುತ್ತಾರೆ. ತನಿಖಾಧಿಕಾರಿಗಳು ದೂರುದಾರರಿಗೆ ವಹಿಸಲಾಗಿದ್ದ ಯೂ.ಎಸ್.ಬಿ ವಾಯ್ಸ್ ರೆಕಾರ್ಡರ್ ಬಗ್ಗೆ ವಿಚಾರಿಸಿದಾಗ ಯೂ ಎಸ್ ಬಿ ವಾಯ್ಸ್ ರೆಕಾರ್ಡರನ್ನು ಹಾಜರುಪಡಿಸಿರುತ್ತಾರೆ. ಸದರಿ ವಾಯ್ಸ್ ರೆಕಾರ್ಡರ್ ನಲ್ಲಿದ್ದ ಧ್ವನಿ ಮುದ್ರಣವನ್ನು ಒಂದು ಸಿ.ಡಿ.ಗೆ ವರ್ಗಾಯಿಸಿ ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರು 1ನೇ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ.

12. 2ನೇ ಎದುರುದಾರರು ಬೇರೊಬ್ಬ ಸರ್ಕಾರಿ ನೌಕರರಿಗೆ ಲಂಚವನ್ನು ನೀಡುವಂತೆ ಸಾರ್ವಜನಿಕವಾಗಿ ಪ್ರೇರೆಪಿಸುವುದು ತಪ್ಪು ಎಂದು ತಿಳಿದಿದ್ದರೂ ಸಹ ದೂರುದಾರರಿಗೆ ಲಂಚದ ಹಣವನ್ನು 1ನೇ ಎದುರುದಾರರಿಗೆ ನೀಡಿ ಕೆಲಸ ಮಾಡಿಸಿಕೊಳ್ಳುವಂತೆ ಪ್ರೇರೇಪಿಸಿರುತ್ತಾರೆ. ಬಿಬಿಎಂಪಿ ವತಿಯಿಂದ 2ನೇ ಎದುರುದಾರರಿಗೆ ನೀಡಿದ್ದ ಸರ್ಕಾರಿ ಸ್ವತ್ತಾದ ಎಂಬಿ ಪುಸ್ತಕವನ್ನು ಸ್ಥಳ ಪರಿಶೀಲನೆ ಮಾಡಿ ಆಗಿರುವ ಕಟ್ಟಡ ಕಾಮಗಾರಿಯ ಪ್ರಗತಿಯನ್ನು ಪಡೆದು ಮೇಲಾಧಿಕಾರಿಗಳಿಗೆ ಎಂ.ಬಿ ಪುಸ್ತಕವನ್ನು ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡುವುದರ ಬದಲಾಗಿ ಸದರಿ ಪುಸ್ತಕವನ್ನು ನಿಯಮ ಬಾಹಿರವಾಗಿ ದೂರುದಾರರಿಗೆ ನೀಡಿ ಅದರಲ್ಲಿ ಅಳತೆಗಳನ್ನು ದೂರುದಾರರೇ ಬರೆದು ಕೊಡುವಂತೆ ಸೂಚಿಸಿ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡಿರುತ್ತಾರೆ. 2ನೇ ಎದುರುದಾರರು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನನ್ನು ಪಡೆದು ತನಿಖಾಧಿಕಾರಿಗಳ ಮುಂದೆ ಹಾಜರಾಗಿ ಜಾಮೀನು ಪಡೆದುಕೊಂಡ ನಂತರ ತಮ್ಮ ಸ್ವರಕ್ಷಣಾ ಹೇಳಿಕೆಯಲ್ಲಿ "ಯಾವುದೇ ಇಂಜನೀಯರುಗಳು 2013ರಲ್ಲಿ ಮನೆಗಳ ನಿರ್ಮಾಣ

ಪೂರ್ಣಗೊಂಡಿದ್ದರೂ ಯಾರೂ 2ನೇ ಬಿಲ್ಲನ್ನು ಮಾಡಿಕೊಟ್ಟಿರುವುದಿಲ್ಲ" ಎಂದು ಹೇಳಿ ಬರೆದುಕೊಟ್ಟಿದ್ದನ್ನು ತನಿಖಾಧಿಕಾರಿಗಳು ತಮ್ಮ ಕಡತದಲ್ಲಿ ಅಳವಡಿಸಿಕೊಂಡಿರುತ್ತಾರೆ.

13. ಸದರಿ ಹಣದ ಬಗ್ಗೆ ತನಿಖಾಧಿಕಾರಿಯವರು 1ನೇ ಎದುರುದಾರರನ್ನು ವಿಚಾರಿಸಿದಾಗ ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ.

14. 2ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು ಬೇರೊಬ್ಬ ಸರ್ಕಾರಿ ನೌಕರರಿಗೆ ಲಂಚವನ್ನು ನೀಡುವಂತೆ ದೂರುದಾರರಿಗೆ ಪ್ರೇರೇಪಿಸುವುದು ತಪ್ಪು ಎಂದು ತಿಳಿದಿದ್ದರೂ ಸಹ 1ನೇ ಎದುರುದಾರರಿಗೆ ಲಂಚದ ಹಣ ನೀಡಿ ಕೆಲಸ ಮಾಡಿಸಿಕೊಳ್ಳುವಂತೆ ದೂರುದಾರರನ್ನು ಪ್ರೇರೇಪಿಸಿರುತ್ತಾರೆ ಮತ್ತು ಕಟ್ಟಡದ ಕಾಮಗಾರಿಯ ಪ್ರಗತಿಯನ್ನು ತಾವೇ ಸ್ಥಳ ಪರಿಶೀಲನೆ ಮಾಡಿ ಬರೆದು ಮೇಲಾಧಿಕಾರಿಗಳಿಗೆ ಕಳುಹಿಸುವುದರ ಬದಲಾಗಿ ನಿಯಮ ಬಾಹಿರವಾಗಿ ದೂರುದಾರರಿಗೆ ನೀಡಿ ಅದರಲ್ಲಿ ಅಳತೆಗಳನ್ನು ಬರೆದುಕೊಡಲು ಸೂಚಿಸಿ ಅವರ ಜವಾಬ್ದಾರಿಯುತ ಅಧಿಕಾರವನ್ನು ದುರ್ಬಳಕೆ ಮಾಡಿರುವುದು ಮತ್ತು ಕರ್ತವ್ಯದಲ್ಲಿ ಉದ್ದೇಶಪೂರ್ವಕವಾಗಿ ನಿರ್ಲಕ್ಷತೆ ತೋರಿಸಿರುವುದು ಕಂಡುಬರುತ್ತದೆ.

15. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

16. ಧ್ವನಿ ವಿಶ್ಲೇಷಣಾ ವರದಿಯಲ್ಲಿ ಮುದ್ರಿತ ಧ್ವನಿಯು ಎದುರುದಾರರ ಧ್ವನಿಯೊಂದಿಗೆ ತಾಳೆಯಾಗಿರುವುದು ದೃಢಪಟ್ಟಿರುತ್ತದೆ ಹಾಗೂ ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇರುವುದು ದೃಢಪಟ್ಟಿರುತ್ತದೆ.

17. ನಂತರ ದಿ: 30-08-2021 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿಗಳನ್ನು ಕೇಳಲಾಗಿತ್ತು. ಆದರೆ, ಎದುರುದಾರರು ತಮ್ಮ ಸಮಜಾಯಿಷಿಯನ್ನು ಸಲ್ಲಿಸಲು ಎರಡು ಮೂರು ಬಾರಿ ಕಾಲಾವಕಾಶವನ್ನು ಕೋರಿದ್ದು, ಅದರಂತೆ ಅವರಿಗೆ ಸಾಕಷ್ಟು ಕಾಲಾವಕಾಶವನ್ನು ನೀಡಿದ್ದರೂ ಸಹ ಎದುರುದಾರರು ತಮ್ಮ ಸಮಜಾಯಿಷಿಯನ್ನು ಸಲ್ಲಿಸಿರುವುದಿಲ್ಲ. ಹಾಗಾಗಿ ಎದುರುದಾರರಿಂದ ಯಾವುದೇ ಸಮಜಾಯಿಷಿಯೂ ಇಲ್ಲವೆಂದು ಪರಿಗಣಿಸಲಾಗಿರುತ್ತದೆ.

18. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ ಇವುಗಳನ್ನು ಪರಿಶೀಲಿಸಿದಾಗ 1ನೇ ಎದುರುದಾರರು ದೂರುದಾರರ ಕೆಲಸ ಮಾಡಿಕೊಡುವುದಾಗಿ ತಿಳಿಸಿ ರೂ.25,000/- ಗಳ ಲಂಚದ

ಹಣಕ್ಕಾಗಿ ಬೇಡಿಕೆಯಿಟ್ಟು ಅದನ್ನು ಪಡೆದುಕೊಂಡಿರುತ್ತಾರೆ ಮತ್ತು 2ನೇ ಎದುರುದಾರರು ದೂರುದಾರರಿಗೆ ಲಂಚದ ಹಣವನ್ನು 1ನೇ ಎದುರುದಾರರಿಗೆ ನೀಡಿ ತಮ್ಮ ಕೆಲಸವನ್ನು ಮಾಡಿಸಿಕೊಳ್ಳುವಂತೆ ಪ್ರೇರೇಪಿಸಿ ಬಿ.ಬಿ.ಎಂ.ಪಿ ವತಿಯಿಂದ 2ನೇ ಎದುರುದಾರರಿಗೆ ನೀಡಿದ ಎಂ.ಬಿ ಪುಸ್ತಕವನ್ನು ದೂರುದಾರರಿಗೆ ನೀಡಿ ಅಳತೆಯನ್ನು ದೂರುದಾರರೇ ಬರೆದುಕೊಡಲು ಸೂಚಿಸಿ ತಮ್ಮ ಕರ್ತವ್ಯದಲ್ಲಿ ನೀತಿ ನಿಷ್ಠೆಯನ್ನು ಪಾಲಿಸದೇ ಕರ್ತವ್ಯದಲ್ಲಿ ಶ್ರದ್ಧೆ ಹೊಂದಿರದೆ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 2021) ರ ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

19. ಈ ಮೇಲ್ಕಂಡ ಅಂಶಗಳಿಂದಾಗಿ ಎದುರುದಾರರುಗಳ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.

20. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

12/7/22

**(ನ್ಯಾಯಮೂರ್ತಿ ಕೆ. ಎನ್. ಫಣೀಂದ್ರ)**
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.